KABG510023012021

RAJEEV GOLASAR Digitally signed by RAJEEV GOLASAR Date: 2024.01.17 18:17:47 +0530

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗೋಕಾಕ**

:: ಉಪಸ್ಥಿತರು ::

**ರಾಜೀವ ಗೋಳಸಾರ** ಬಿ.ಎ., ಎಲ್.ಎಲ್.ಎಂ.,

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ., ಗೋಕಾಕ.

ದಿನಾಂಕ 12 ನೇ ಜನವರಿ 2024

**ಅಸಲು ದಾವೆ ನಂ.166/2021**

**ವಾದಿಯರುಃ** ಶ್ರೀ ವೆಂಕಟೇಶ ಅಂಬಾಸಾ ವಾಗುಲೆ,

(ಶ್ರೀ. ಎಲ್ ಎಂ ಎಸ್, ವಕೀಲರು)

**- ವಿರುದ್ಧ -**

**ಪ್ರತಿವಾದಿಯರುಃ** ಶ್ರೀಮತಿ ಮಹಾದೇವಿ ರಾಜಶೇಖರ ಕೊಳವಿ,
ಮತ್ತು ಇತರರು

(ಪ್ರ.1 ರಿಂದ 3 ಶ್ರೀ ಎಸ್ ಬಿ ಹೆಚ್. ವಕೀಲರು,

**ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲೆ ಆದೇಶ**

ಸದರಿ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ಪ್ರತಿವಾದಿಯ ಪರ ವಕೀಲರು ದಿವಾಣಿ ಪ್ರಕ್ರಿಯಾ ಸಂಹಿತೆಯ ಕಲಂ 10 ರಡಿ ಸಲ್ಲಿಸಿ, ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳ ಆಧಾರದ ಮೇಲೆ ಪ್ರತಿವಾದಿಯರು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ ಅಸಲು ದಾವಾ ಸಂಖ್ಯೆಃ 488/2010 ರ ದಾವೆ ಅಂತಿಮ ತೀರ್ಮಾನವಾಗುವವರೆಗೆ ಈ ದಾವೆ ಮುಂದುವರೆಯುವುದನ್ನು ತಡೆಹಿಡಿಯಬೇಕು ಎಂದು ಕೋರಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಸದರಿ ಮಧ್ಯಂತರ ಅರ್ಜಿಗೆ ಪೂರಕವಾಗಿ ಪ್ರತಿವಾದಿ.2 ರವರು ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಪ್ರತಿವಾದಿ 1 ಮತ್ತು 3 ರವರು ತಮ್ಮ ತಾಯಿ ಮತ್ತು ಸಹೋದನಾಗಬೇಕು, ವಾದಿಯ ಪರಿಚಯ ತಮಗೆ

ಇರುತ್ತದೆ. ತನಗೆ ಈ ದಾವೆಯ ವಸ್ತು ವಿಷಯ ಗೊತ್ತಿರುತ್ತದೆ. ತಾವು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಈ ಪ್ರಮಾಣ ಪತ್ರದ ಒಂದು ಭಾಗವೆಂದು ಪರಿಗಣಿಸಲು ಕೋರಿಕೊಂಡಿರುತ್ತಾರೆ.

3. ಮುಂದುವರೆದು ಪ್ರತಿವಾದಿ 2 ರವರು ತಮ್ಮ ಪ್ರಮಾಣ ಪತ್ರದಲ್ಲಿ ವಾದಿಯು ಈ ದಾವೆಯನ್ನು ತಮ್ಮ ವಿರುದ್ಧ ಸುಳ್ಳು ಮತ್ತು ಕಿರುಕುಳಕಾರಿಯಾದ ದಾವಾ ಸ್ವತ್ತಿನ ಘೋಷಣಾತ್ಮಕ ಮತ್ತು ಸ್ವಾಧೀನತೆ ಪರಿಹಾರ ಕೋರಿ ಸಲ್ಲಿಸಿರುತ್ತಾನೆ. ತಾವು ಈ ದಾವೆಯಲ್ಲಿ ಹಾಜರಾಗಿ ವಾದಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ಅಲ್ಲಗೆಳೆದು ಪ್ರತಿವಾದ ಪತ್ರ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದವರು ಈ ದಾವೆಯಲ್ಲಿ ವಿವಾದಾಂಶಗಳನ್ನು ರೂಪಿಸಿದ್ದು, ವಾದಿಯು ದಿನಾಂಕ 09-08-2023 ರಂದು ಪ್ರಾಸಾ1 ಎಂದು ಸಾಕ್ಷಿ ವಿಚಾರಣೆ ಮಾಡಿಕೊಂಡಿದ್ದು, ಈಗ ಈ ದಾವೆಯು ಮುಂದುವರೆದ ಪ್ರಾಸಾ 1 ರವರ ಸಾಕ್ಷಿ ವಿಚಾರಣೆಗಾಗಿ ಇರುತ್ತದೆ. ತಾವು ಈಗಾಗಲೇ ಇದೇ ನ್ಯಾಯಾಲಯದಲ್ಲಿ ಈ ದಾವೆಯ ವಾದಿ ಮತ್ತು ಇತರರ ವಿರುದ್ಧ ದಾವಾ ಸ್ವತ್ತಿನ ಕುರಿತು ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಅಸಲು ದಾವಾ ಸಂಖ್ಯೆ 488/2010 ರಂತೆ ದಾವಾ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಈ ದಾವೆಯ ವಾದಿಯು ತಮ್ಮ ನ್ಯಾಯವಾದಿಗಳ ಮುಖಾಂತರ ಹಾಜರಾಗಿ ಪ್ರತಿವಾದಪತ್ರವನ್ನು ಸಲ್ಲಿಸಿರುತ್ತಾನೆ. ಸದರಿ ದಾವೆಯಲ್ಲಿ ತಾನು ಪ್ರಾಸಾ.1 ಎಂದು ಸಾಕ್ಷಿ ವಿಚಾರಣೆ ಮಾಡಿಕೊಂಡಿದ್ದು, ತನ್ನನ್ನು ಈ ದಾವೆಯ ವಾದಿಯ ಪರ ವಕೀಲರು ಸಂಪೂರ್ಣ ಪಾಟಿ ಸವಾಲು ಮಾಡಿರುತ್ತಾರೆ. ಸದರಿ ಅಸಲು ದಾವಾ ಸಂಖ್ಯೆ 488/2010 ರ ದಾವೆಯು ಈಗ ಮುಂದುವರೆದ ವಾದಿ ಪರ ಸಾಕ್ಷಿ ವಿಚಾರಣೆಗೆ ಮುಂದೂಡಿದ್ದು ಮತ್ತು ಭಾವಿತ ಪ್ರತಿವಾದಿಯರಿಗೆ ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯದವರು ನೋಟಿಸು ಕಳುಹಿಸಿರುತ್ತಾರೆ. ತಾವು ದಾವಾ ಸ್ವತ್ತಿನ ಕುರಿತು ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರ ಕೋರಿ ಸಲ್ಲಿಸಿರುವ ಸಂಗತಿ ವಾದಿಗೆ ಗೊತ್ತಿರುತ್ತದೆ. ಸದರಿ ದಾವೆಯಲ್ಲಿ ಮತ್ತು ಈ ದಾವೆಯಲ್ಲಿನ ಪಕ್ಷಗಾರರು, ದಾವಾ ಸ್ವತ್ತು ಹಾಗೂ ವಿವಾದಾಂಶಗಳು ಒಂದೇ ತೆರನಾಗಿರುತ್ತದೆ. ತಾವು ಸಲ್ಲಿಸಿದ ಅಸಲು ದಾವಾ ಸಂಖ್ಯೆ 488/2010 ರ ದಾವೆ ಸಲ್ಲಿಸಿ ಆದ ನಂತರ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಎರಡು ದಾವೆಗಳನ್ನು ಸ್ವತಂತ್ರವಾಗಿ ಸುನಾವಣೆ ಮಾಡಿ ನಡೆಸಿದರೆ ಎರಡು ದಾವೆಗಳಲ್ಲಿ ಬೇರೆ ಬೇರೆ ತೀರ್ಪುಗಳು ಆಗುವ ಸಂಭವವಿರುತ್ತದೆ. ಇದರಿಂದ ಹಲವು ಬಗೆಯ ಪ್ರಕ್ರಿಯೆಗಳನ್ನು ಮಾಡಿದಂತಾಗುತ್ತದೆ. ಹೀಗಾಗಿ ತಾವು ಸಲ್ಲಿಸಿದ ಅಸಲು ದಾವಾ ಸಂಖ್ಯೆ:488/2010 ರ ಅಂತಿಮ

ತೀರ್ಮಾನವಾಗುವವರೆಗೆ ವಾದಿ ಸಲ್ಲಿಸಿದ ಈ ದಾವೆಯ ಮುಂದುವರೆಯುವಿಕೆಯನ್ನು ತಡೆ ಹಿಡಿಯಬೇಕು ಎಂದು ತಮ್ಮ ಪ್ರಮಾಣ ಪತ್ರದಲ್ಲಿ ನಿವೇದಿಸಿಕೊಂಡಿರುತ್ತಾರೆ.

4. ಮುಂದುವರೆದು ಪ್ರತಿವಾದಿ 2 ರವರು ತಮ್ಮ ಪ್ರಮಾಣಪತ್ರದಲ್ಲಿ ಈ ಮಧ್ಯಂತರ ಅರ್ಜಿಯನ್ನು ಪುರಸ್ಕಾರ ಮಾಡದೆ ಇದ್ದರೆ ತನಗೆ ತುಂಬಲಾರದ ನಷ್ಟ ವ ಹಾನಿಯುಂಟಾಗುತ್ತದೆ. ಒಂದು ವೇಳೆ ಮಧ್ಯಂತರ ಅರ್ಜಿಯನ್ನು ಪುರಸ್ಕಾರ ಮಾಡಿದರೆ ವಾದಿಗೆ ಯಾವುದೇ ತೊಂದರೆ ವ ಹಾನಿ ಉಂಟಾಗುವುದಿಲ್ಲ ಎಂದು ತಮ್ಮ ಪ್ರಮಾಣ ಪತ್ರದಲ್ಲಿ ಕೋರಿಕೊಂಡು ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಕೋರಿಕೊಂಡಿರುತ್ತಾರೆ.

**5.** ಸದರಿ ಮಧ್ಯಂತರ ಅರ್ಜಿಗೆ ವಾದಿ ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ, ದಿವಾಣಿ ಪ್ರಕ್ರಿಯಾ ಸಂಹಿತೆಯ ಕಲಂ 10 ರಡಿ ದಾವೆಯ ಪ್ರತಿಷೇದ ಆಗಬೇಕಾದರೆ ವ್ಯಾಜ್ಯ ಕಾರಣ, ದಾವಾ ವಿಷಯ ವಸ್ತು, ಒಂದೇ ತೆರನಾದ ಪರಿಹಾರ ಇದ್ದರೆ ಮಾತ್ರ ಅನ್ವಯವಾಗುತ್ತದೆ. ಎರಡು ದಾವೆಗಳ ವ್ಯಾಜ್ಯ ಕಾರಣಗಳು ಬೇರೆ ಬೇರೆ ಆಗಿರುತ್ತವೆ. ಅದರಂತೆ ಎರಡು ದಾವೆಗಳಲ್ಲಿನ ಪರಿಹಾರವೂ ಬೇರೆ ಬೇರೆ ಆಗಿರುತ್ತವೆ. ಈ ದಾವೆಯ ಪ್ರತಿವಾದಿ 1 ರವರು ದುರುದ್ದೇಶ ಇಟ್ಟುಕೊಂಡು ಅಸಲು ದಾವಾ ಸಂಖ್ಯೆ 488/2010 ರಂತೆ ಸುಳ್ಳು ದಾವೆ ಸಲ್ಲಿಸಿದ್ದು, ವಾದಿಯ ಪರಿಹಾರ ಈ ದಾವೆಯ ವಿಚಾರಣೆಯನ್ನು ಮುಂದುವರೆಯುವುದನ್ನು ತಡೆ ಹಿಡಿದು ತಳ್ಳಿ ಹಾಕಲು ಆಗುವುದಿಲ್ಲ. ವಾದಿ ಸ್ವತಂತ್ರ ಪರಿಹಾರ ಕೋರಿ ಈ ಸ್ವತಂತ್ರ ದಾವೆಯನ್ನು ಸಲ್ಲಿಸಿದ್ದು, ಅದನ್ನು ತಡೆ ಹಿಡಿಯಲು ಆಗುವುದಿಲ್ಲ. ಎರಡು ದಾವೆಗಳಲ್ಲಿನ ವಿವಾದಗಳು ಬೇರೆ ಬೇರೆ ಇರುತ್ತವೆ. ಹೀಗಾಗಿ ವಾದಿ ಸಲ್ಲಿಸಿದ ಈ ದಾವೆಯನ್ನು ತಡೆ ಹಿಡಿಯಲು ಬರುವುದಿಲ್ಲ. ಆದುದರಿಂದ ಪ್ರತಿವಾದಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲು ಕೋರಿಕೊಂಡಿರುತ್ತಾರೆ.

**6.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ವಾದಿ ಪರ ವಕೀಲರು ಸಲ್ಲಿಸಿರುವ ಲಿಖಿತ ವಾದ ಮಂಡನೆಯನ್ನು ಪರಿಶೀಲನೆ ಮಾಡಲಾಯಿತು.

**7.** ಹೀಗಾಗಿ ಈ ಮಧ್ಯಂತರ ಅರ್ಜಿಯ ವಿಲೇವಾರಿಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

1. ಅರ್ಜಿದಾರ / ಪ್ರತಿವಾದಿಯರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ಪುರಸ್ಕಾರ ಮಾಡಲು ಸಕಾರಣಗಳನ್ನು ನೀಡಿರುತ್ತಾರೆಯೆ?
2. ಯಾವ ಆದೇಶ ?

**8.** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ ನಂ.1: ನಕಾರಾತ್ಮಕವಾಗಿ.

ಅಂಶ ನಂ.2: ಅಂತಿಮ ಆದೇಶದಂತೆ ಈ ಕೆಳಕಂಡ.

**ಕಾರಣಗಳು**

9. **ಅಂಶ ನಂ.1 ಕ್ಕೆ:** ಈ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿನ ಕುರಿತು ತಾವು ದಿನಾಂಕ 18-12-2009 ರಂದು ದಾವಾ ಸ್ವತ್ತನ್ನು ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿಸಿರುವುದರಿಂದ ದಾವಾ ಸ್ವತ್ತಿನ ಮಾಲೀಕರಾಗಿರುತ್ತೇವೆ ಎಂದು ಘೋಷಿಸುವುದಕ್ಕಾಗಿ ಮತ್ತು ಪ್ರತಿವಾದಿಯರಿಂದ ದಾವಾ ಸ್ವತ್ತಿನ ಸ್ವಾಧೀನತೆ ಪಡೆಯುವುದಕ್ಕಾಗಿ ಈ ದಾವೆಯನ್ನು ಘೋಷಣಾತ್ಮಕ ಪರಿಹಾರ ಹಾಗೂ ಸ್ವಾಧೀನತೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

10. ವಾದಿಯ ಪ್ರಕಾರ ದಾವಾ ಅನುಸೂಚಿ ಸ್ವತ್ತು ಪ್ರತಿವಾದಿಯರ ಮೂಲ ಪುರುಷನಾದ ಗುರುಬಸಪ್ಪ ರವರ ಮಕ್ಕಳಾದ ಬಸಪ್ಪ ಮತ್ತು ದುಂಡಪ್ಪ ರವರಿಗೆ ಸೇರಿದ ಸ್ವತ್ತಾಗಿದ್ದು, ದಾವಾ ಸ್ವತ್ತನ್ನು ಶಹಾ ಎನ್ನುವರಿಗೆ ದಿನಾಂಕ 08-05-1956 ರಂದು ಮಾರಾಟ ಮಾಡಿದ್ದು, ದಾವಾ ಸ್ವತ್ತಿನ ಸಿ ಟಿ ಎಸ್ ನಂ.4469/ಎ ವಿಸ್ತೀರ್ಣ 37.62 ಚದುರ ಮೀಟರ್ ಇದ್ದು, ಸದರಿ ಸ್ವತ್ತನ್ನು ಈರಪ್ಪ ಬಸಪ್ಪ ಕೊಳವಿರವರು ಶಹಾ ರವರ ಕಡೆಯಿಂದ ದಿನಾಂಕ 23-12-1964 ರಂದು ಖರೀದಿ ಮಾಡಿದ್ದು, ಸದರಿ ಈರಪ್ಪ ರವರ ಹೆಸರಿನಲ್ಲಿ ಈರಪ್ಪರವರ ತಾಯಿಯಾದ ಶ್ರೀಮತಿ ಸುಶೀಲ ಬಸಪ್ಪ ಕೋಳವಿರವರು ತನ್ನ ತವರು ಮನೆಯವರ ಸಹಾಯದಿಂದ ಖರೀದಿಸಿದ್ದು, ಹೀಗಾಗಿ ಈರಪ್ಪ ರವರು ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು, ಈರಪ್ಪ ರವರ ಜೀವಿತಾವಧಿಯಲ್ಲಿ ಈರಪ್ಪನ ಸಹೋದರರು ದಾವಾ ಸ್ವತ್ತಿನಲ್ಲಿ ಯಾವುದೇ ಹಿಸ್ಸೆ ಕೇಳಿರುವುದಿಲ್ಲ. ಈರಪ್ಪ ರವರು ತಮ್ಮ ಜೀವಿತಾವಧಿಯಲ್ಲಿ ದಾವಾ ಸ್ವತ್ತನ್ನು ಬಾಡಿಗೆಗೆ ನೀಡಿ, ಗೋಕಾಕಿನ ಮಹಾಲಿಂಗೇಶ್ವರ ನಗರದಲ್ಲಿ ವಾಸವಾಗಿದ್ದು, ದಾವಾ ಮನೆಯು 2005 ರಲ್ಲಿ ಖಾಲಿ ಉಳಿದಿದ್ದು, ನಂತರ ಪ್ರತಿವಾದಿಯರು ಈರಪ್ಪ ರವರ ದಾವಾ ಮನೆಯನ್ನು ಬಾಡಿಗೆಗೆ ಪಡೆದುಕೊಂಡು ವಾಸವಾಗಿದ್ದು, ನಂತರ ಈರಪ್ಪ ರವರು ದಾವಾ ಸ್ವತ್ತನ್ನು ಮಾರಾಟ ಮಾಡಲು ತೆಗೆದಾಗ ಪ್ರತಿವಾದಿಯರು ದಾವಾ ಮನೆಯನ್ನು ಖಾಲಿ ಮಾಡಿಕೊಂಡು ಹೊರಹೋಗಿದ್ದರು, ತದನಂತರ ಈರಪ್ಪ ಬಸಪ್ಪ ಕೊಳವಿ ರವರು ದಿನಾಂಕ 21-11-2008 ರಂದು ಮೃತ ರಾಗಿದ್ದು, ತದನಂತರ ಈರಪ್ಪನ ಹೆಂಡತಿ ಮಕ್ಕಳ ಹೆಸರು ದಾವಾ ಸ್ವತ್ತಿನ ದಾಖಲೆಗಳ ಮೇಲೆ ನಮೂದು ಆಗಿದ್ದು, ಈರಪ್ಪ ರವರ ವಾರಸುದಾರರು ನೊಂದಾಯಿತ ಖರೀದಿ ಪತ್ರದ ಮೂಲಕ ವಾದಿಗೆ ದಿನಾಂಕ 18-12-2009 ರಂದು ದಾವಾ ಸ್ವತ್ತನ್ನು ಮಾರಾಟ ಮಾಡಿದ್ದು, ನಂತರ ವಾದಿಯು ದಾವಾ ಸ್ವತ್ತನ್ನು ವಾಣಿಜ್ಯ

ಉದ್ದೇಶಕ್ಕಾಗಿ ಉಪಭೋಗ ಮಾಡುತ್ತಿದ್ದು, ವಾದಿಗೆ ಮಾರಾಟ ಮಾಡಿದ ಮಾಲೀಕರ ಮಧ್ಯ ಮತ್ತು ಪ್ರತಿವಾದಿಯರ ಮಧ್ಯ ದಾವಾ ಸ್ವತ್ತಿನ ಕುರಿತು ವಿವಾದ ಉಂಟಾಗಿ ವಾದಿಯ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು ಅಡೆತಡೆ ಮಾಡಿದ್ದಕ್ಕಾಗಿ ವಾದಿ ಇದೆ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 387/2011 ರಂತೆ ಶಾಶ್ವತ ತಡೆಯಾಜ್ಞೆ ಪರಿಹಾರ ಕೋರಿ ಹೂಡಿದ್ದು, ವಾದಿ ತಮ್ಮ ಪಾಟಿ ಸವಾಲಿನಲ್ಲಿ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ವಾಸವಾಗಿರುತ್ತಾರೆ ಎಂದು ಒಪ್ಪಿಕೊಂಡ ಕಾರಣದಿಂದ ವಾದಿ ಸಲ್ಲಿಸಿದ ಅಸಲು ದಾವಾ ಸಂಖ್ಯೆ 387/2011 ರ ದಾವೆಯನ್ನು ಈ ನ್ಯಾಯಾಲಯದವರು ವಜಾಗೊಳಿಸಿರುತ್ತಾರೆ. ಸದರಿ ದಾವೆ ವಜಾಗೊಂಡ ತಕ್ಷಣ ಪ್ರತಿವಾದಿಯರು ದಾವಾ ಸ್ವತ್ತಿನ ಭಾಗಕ್ಕೆ ಕೀಲಿಯನ್ನು ಹಾಕಿರುತ್ತಾರೆ. ಆ ಕುರಿತು ವಾದಿ ಪೋಲಿಸ ಠಾಣೆಗೆ ಹೋದರು ಸಹ ಯಾವುದೇ ಪ್ರಯೋಜನ ಆಗಿರುವುದಿಲ್ಲ, ಪ್ರತಿವಾದಿ 1 ರವರ ಯಜಮಾನರು ದಾವಾ ಸ್ವತ್ತಿನಲ್ಲಿ ಹಿಸ್ಸೆ ಹೊಂದಿರುತ್ತಾರೆ ಎನ್ನುವ ಕಾರಣಕ್ಕಾಗಿ ಪ್ರತಿವಾದಿಯರು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 488/2011 ರಂತೆ ದಾವೆ ಸಲ್ಲಿಸಿದ್ದು, ಸದರಿ ದಾವೆ ಇನ್ನು ವಿಚಾರಣಾ ಹಂತದಲ್ಲಿ ಇರುತ್ತದೆ. ಪ್ರತಿವಾದಿಯರು ತನಗೆ ಮಾರಾಟ ಮಾಡಿದ ಸದಸ್ಯರ ಕುಟುಂಬದವರಾಗಿದ್ದರೂ ಸಹ ದಾವಾ ಸ್ವತ್ತಿನಲ್ಲಿ ಯಾವುದೇ ಹಿಸ್ಸೆ ಹೊಂದಿರುವುದಿಲ್ಲ. ಪ್ರತಿವಾದಿಯರು ವಾದಿಯ ಸ್ವಾದೀನಾನುಭವದಲ್ಲಿರುವ ದಾವಾ ಮನೆಗೆ ಕೀಲಿ ಹಾಕಿ ಸದರಿ ಮನೆಯ ಜಾಗದಲ್ಲಿ ತಮ್ಮ ಗೃಹೊಪಯೋಗಿ ವಸ್ತುಗಳನ್ನು ದಿನಾಂಕ 25-03-2021 ರಂದು ತಂದು ಇಟ್ಟಿದ್ದು, ಹೀಗಾಗಿ ತಾನು ಈ ದಾವೆಯನ್ನು ಸ್ವಾಧೀನತೆ ಪರಿಹಾರ ಕೋರಿ ಮತ್ತು ತಾನು ದಾವಾ ಸ್ವತ್ತಿನ ಮಾಲೀಕನಾಗಿರುತ್ತೇನೆ ಎಂದು ಕೋರಿಕೊಂಡು ಈ ದಾವೆಯನ್ನು ಸಲ್ಲಿಸಿರುತ್ತಾರೆ.

11. ಈ ದಾವೆಯಲ್ಲಿ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ವಾದಪತ್ರದಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳನ್ನು ಅಲ್ಲಗೆಳೆದು, ವಾದಿ ಸಲ್ಲಿಸಿದ ಈ ದಾವೆ ಕಾನೂನಿನಡಿಯಲ್ಲಾಗಲೀ, ವಸ್ತು ವಿಷಯದಡಿಯಲ್ಲಾಗಲೀ ನಿಲ್ಲುವಂತದ್ದಲ್ಲ, ವಾದಿ ಘೋಷಣಾತ್ಮಕ ಹಾಗೂ ಸ್ವಾಧೀನತೆ ಪರಿಹಾರ ಕೋರಿ ಸಲ್ಲಿಸಿದ ಈ ದಾವೆ ಕಾಲಪರಿಮಿತಿ ಮೀರಿದ ದಾವೆಯಾಗಿರುತ್ತದೆ, ದಾವಾ ಸ್ವತ್ತಿನ ಕುರಿತು ವಿವಾದಿತ ಕ್ರಯಪತ್ರ ಮಾಡಿಕೊಂಡು ಮಾರಾಟಗಾರರಿಗೆ ಯಾವುದೇ ಹಕ್ಕು ಇರುವುದಿಲ್ಲ ಎನ್ನುವ ಪ್ರತಿರಕ್ಷೆಯನ್ನು ತಮ್ಮ ಪ್ರತಿವಾದ ಪತ್ರದಲ್ಲಿ ತಗೆದುಕೊಂಡಿರುತ್ತಾರೆ.

12. ಈ ದಾವೆಯ ಪ್ರತಿವಾದಿಯರು ಈ ದಾವೆಯ ದಾವಾ ಸ್ವತ್ತಿನ ಕುರಿತು ಈ ದಾವೆಯ ವಾದಿ ಹಾಗೂ ಇತರರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.488/2010 ರಂತೆ 1/4 ಹಿಸ್ಸೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಪರಿಹಾರ ಕೋರಿ ಹೂಡಿದ್ದು, ಸದರಿ ದಾವೆ ಇದೇ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಹೀಗಾಗಿ ಈ ದಾವೆಯ ವಿಚಾರಣೆಯನ್ನು ತಡೆ ಹಿಡಿಯಲು ಕೋರಿಕೊಂಡು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

13. ಈ ದಾವೆ ಹಾಗೂ ಅಸಲು ದಾವಾ ಸಂಖ್ಯೆ 488/2010 ರಲ್ಲಿನ ದಾವಾ ಸ್ವತ್ತು ಒಂದೇ ಆಗಿರುತ್ತದೆ. ಆದರೆ ಎರಡೂ ದಾವೆಗಳಲ್ಲಿನ ಪರಿಹಾರ ಬೇರೆ ಬೇರೆಯಾಗಿರುತ್ತದೆ ಮತ್ತು ಎರಡು ದಾವೆಗಳಲ್ಲಿನ ವಿವಾದಾಂಶಗಳೂ ಸಹ ಬೇರೆ ಬೇರೆಯಾಗಿದ್ದು, ನೇರವಾಗಿಯಾಗಲೀ ಸಾರಭೂತವಾಗಿಯಾಗಲಿ ಒಂದೇ ತೆರನಾಗಿಯಿರುವುದಿಲ್ಲ, ಹೀಗಾಗಿ ಪ್ರತಿವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆಯ ಕಲಂ.10 ರಡಿ ಸಲ್ಲಿಸಿದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕಾರ ಮಾಡಲು ಸಕಾರಣಗಳನ್ನು ನೀಡಿರುವುದಿಲ್ಲ ಎಂದು ಪರಿಗಣಿಸಿ ಅಂಶ 1 ಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**14.** **<u>ಅಂಶ ನಂ.2:</u>** ಮೇಲಿನ ಅಂಶ ನಂ.1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಿದ್ದರಿಂದ, ಈ ಕೆಳಗಿನಂತೆ.

**<u>ಆದೇಶ</u>**

- ಅರ್ಜಿದಾರರು/ಪ್ರತಿವಾದಿಯವರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 10 ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ವಜಾಗೊಳಿಸಲಾಗಿದೆ .

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದನ್ನು ಪರಿಷ್ಕರಿಸಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕ 12.01.2024 ರಂದು ಘೋಷಿಸಲಾಗಿದೆ.)

**(ರಾಜೀವ ಗೋಳಸಾರ)**
**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಗೋಕಾಕ.**